ಇರುತ್ತದೆ. ಸದ್ಯ ಕಾರ್ಖಾನೆಯಲ್ಲಿರುವ ಸಕ್ಕರೆ ದಾಸ್ತಾನು ಪ್ರಚಲಿತ ಮಾರುಕಟ್ಟೆ ಬೆಲೆಗೆ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಹೊಂದಾಣಿಕೆಯಾಗುತ್ತದೆ.

ಉ) 1,55,684 ಕ್ವಿಂಟಾಲ್

ಊ) ನೀಡಲಾಗಿದೆ.

79 ಶ್ರೀ ಕರಡಿ ಸಂಗಣ್ಣ ಅಮರಪ್ಪ ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರದಲ್ಲಿ ಉದ್ಯಾನವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಉದ್ಯಾನವನಕ್ಕಾಗಿ ಯಾವ ಬಡಾವಣೆಯಲ್ಲಿ ಸ್ಥಳ ಗುರುತಿಸಲಾಗಿದೆ ಅದರ ರೂಪುರೇಷೆಗಳೇನು;

ಇ) ಉದ್ಯಾನವನವನ್ನು ನಿರ್ಮಿಸಲು ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಈ) ಹಾಗಿದ್ದಲ್ಲಿ ನಿರ್ಮಾಣಕ್ಕಾಗಿ ನೀಡುವ ಅನುದಾನದ ಮೊತ್ತ ಎಷ್ಟು?

ಶ್ರೀ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)

ಅ) ಇಲ್ಲ

ಆ,ಇ,ಈ) ಉದ್ಭವಿಸುವುದಿಲ್ಲ.

1124 ಶ್ರೀ ಕರಡಿ ಸಂಗಣ್ಣ ಅಮರಪ್ಪ ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರದಲ್ಲಿ ಆಟೋಗಳಿಗೆ ಪೆಟ್ರೋಲಿಯಂ ಗ್ಯಾಸ್ ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನೀಗಿಸಲು ತೆಗೆದುಕೊಂಡ ಕ್ರಮವೇನು;

ಇ) ಆಟೋ ಚಾಲಕರ ತೊಂದರೆಯನ್ನು ಹೋಗಲಾಡಿಸಲು ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗುವುದೇ;

ಈ) ಹಾಗಿದ್ದಲ್ಲಿ, ಯಾವ ರೀತಿಯ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗುವುದು;

ಉ) ಕೊಪ್ಪಳ ನಗರದಲ್ಲಿ ಪೆಟ್ರೋಲಿಯಂ ಗ್ಯಾಸ್ ಪಂಪನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಎಂದಿನಿಂದ ಪೆಟ್ರೋಲ್ ಗ್ಯಾಸ್ ಪಂಪ್‌ನ್ನು ಪ್ರಾರಂಭಿಸ ಲಾಗುವುದು?

ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಇಲ್ಲ, ಈ ಸಂಬಂಧದಲ್ಲಿ 3 ತೈಲ ಕಂಪನಿಗಳಿಂದ ವರದಿಯನ್ನು ತರಿಸಿದ್ದು, ಅದರಲ್ಲಿ ಕೊಪ್ಪಳ ನಗರದಲ್ಲಿ ಯಾವುದೇ ಆಟೋ ಎಲ್.ಪಿ.ಜಿ. ಕೇಂದ್ರವನ್ನು ಸ್ಥಾಪಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಂದರೆ, ಪ್ರಸ್ತುತದಲ್ಲಿ ವಾಹನಗಳಿಗೆ ಇಂಧನವಾಗಿ ಎಲ್.ಪಿ.ಜಿ.ಯನ್ನು ಬಳಸುತ್ತಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅಗತ್ಯ ಬಂದಲ್ಲಿ ಮಾಡಲಾಗುವುದು.

ಈ) ತೈಲ ಕಂಪನಿಗಳು ಸಂಬಂಧಪಟ್ಟ ಪ್ರದೇಶದ ವ್ಯಾಪ್ತಿಯಲ್ಲಿ ಮಾರುಕಟ್ಟೆ ಸಮೀಕ್ಷೆಯನ್ನು ನಡೆಸಿ ಆಟೋ ಎಲ್.ಪಿ.ಜಿ. ಇಂಧನದ ಬೇಡಿಕೆ ಇದ್ದಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳುತ್ತವೆ.

ಉ) ಪ್ರಸ್ತುತದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಪ್ರಸ್ತಾವನೆ ಬಂದ ನಂತರ ಪರಶೀಲಿಸಿ ಕ್ರಮ ಕೈಗೊಳ್ಳ ಲಾಗುವುದು.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

935 ಶ್ರೀ ಖಾದರ್ ಯು.ಟಿ. ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;